ಬದುಕಿನ ಓಟದಲ್ಲಿ ನಮ್ಮ ಮುಂದಿನ ಭವಿಷ್ಯಕ್ಕೆ ಆಸರೆಯಾಗಿರಲಿ ಎಂದು ಸಂಪಾದನೆಯ ಹಿಂದೆ ಬಿದ್ದು ನಮ್ಮವರನ್ನೇ ಕಡೆಗಣಿಸುತ್ತೇವೆ. ಬದುಕಿಗೆ ಕೆಲಸ ಸಂಪಾದನೆ ಎಲ್ಲವೂ ಮುಖ್ಯ. ಆದರೆ ನಮ್ಮವರ ಜೊತೆಗೆ ಕೆಲಸದ ಒತ್ತಡವೆಂದು ಸಿಡುಕಿನಿಂದ ಮಾತನಾಡುತ್ತಾ ಸಮಯ ಕೊಡದೆ ಬದುಕುವುದರಲ್ಲಿ ಅರ್ಥವಿಲ್ಲ. ಇದ್ದಾಗ ಒಬ್ಬರಿಗೊಬ್ಬರು ಆಸರೆಯಾಗಿ, ಪ್ರೀತಿಯಿಂದ ಬದುಕುವುದೇ ಜೀವನ.




ಚಹಾ ಮಾಡುವುದು ಕೂಡ ನನಗೆ ಇಷ್ಟದ ಕೆಲಸವೇ. ಆದರೆ ಬೆಂಗಳೂರಿನ ಧಾವಂತದ ಜೀವನದಲ್ಲಿ ಪ್ರತಿ ದಿನ ಚಹಾವನ್ನು ಗಡಿಬಿಡಿಯಲ್ಲಿ ಮಾಡಿ ಗಡಿಬಿಡಿಯಲ್ಲಿ ಕುಡಿದು ಕಾಲೇಜಿಗೆ ಓಡುತ್ತಿದ್ದೆ. ಚಹಾವನ್ನು ಆಸ್ವಾದಿಸುತ್ತಾ ಹೀರುವ ಅವಕಾಶವೇ ಕಡಿಮೆಯಾಗಿತ್ತು. ಆದರೆ ಯಾವಾಗ ಈ ಚಹಾ ಮಾಡುವ ಕೆಲಸ ಗಂಡನ ಪಾಲಾಯಿತೋ ಚಹಾ ಗುಟುಕು ಗುಟುಕಾಗಿ ಹೀರುವ ಆಸ್ವಾದ ಆಹ್ಲಾದಕರವಾಯಿತು. ಗಟ್ಟಿಯಾದ ಹಾಲನ್ನು ಹಾಕಿ ಹದವಾಗಿ ಬಿಸಿಯಾಗುವ ಹೊತ್ತಿನಲ್ಲಿ ಚಹಾ ಪುಡಿ ಸಕ್ಕರೆ ಹಾಕಿ ಅದು ಬಣ್ಣ ಮತ್ತು ಕಂಪು ಬರುವಷ್ಟು ಕುದಿಸಿ ಪ್ರೀತಿಯಿಂದ ನೀಡಿದಾಗ ಆ ಚಹಾದ ರುಚಿ ದುಪ್ಪಟ್ಟು ಆಗುತ್ತಿತ್ತು. ನನ್ನ ಈ ಪರಿಸ್ಥಿತಿಯನ್ನು ನೋಡಲು ಬಂದಿರುವಂತಹ ಆತ್ಮೀಯರಿಗೂ ಸಹ ಚಹಾ ಸೇವನೆಯ ಹಿತ ಸಿಕ್ಕಂತಾಯಿತು.


ಇನ್ನೊಂದು ದಿನ ಮಗಳು ಶಾಲೆಯಿಂದ ಬಂದವಳೇ ಕೇಳಿದಳು. 'ಅಮ್ಮ ಮನೆಗೆ ಹೊಸ ಪಾತ್ರೆಗಳನ್ನು ಖರೀದಿ ಮಾಡಿದ್ದೀಯಾ?'

'ಇಲ್ಲವಲ್ಲ, ಯಾಕೆ?' ಎಂದು ಕೇಳಿದೆ.

'ಏನಿಲ್ಲ ಅಪ್ಪ ಪಾತ್ರೆ ತಿಕ್ಕಲು ಶುರು ಮಾಡಿದ ದಿನದಿಂದ ಪಾತ್ರಗಳೆಲ್ಲ ಫಳಫಳ ಎಂದು ಹೊಳೆಯುತ್ತಿದೆ. ಅದಕ್ಕೆ ಹೊಸ ಪಾತ್ರೆ ಬಂದಿದೆಯಾ ಎಂಬ ಅನುಮಾನವಾಯಿತು' ಎಂದು ಹೇಳಿದಳು. ನನಗೆ ಏಕಕಾಲದಲ್ಲಿ ನಾಚಿಕೆಯು, ನಗುವು ಬಂತು. ಪಾತ್ರೆ ತೊಳೆಯುವುದನ್ನು ಕೆಲಸ ಎಂದು ಪರಿಗಣಿಸಿದ ನನಗೆ ಅದರ ಬಗ್ಗೆ ಲಕ್ಷ್ಯವೇ ಇರಲಿಲ್ಲ. ಅಲ್ಲಿಗೆ ಯಾವ ಕೆಲಸವನ್ನು ಮಾಡುತ್ತಿಯೋ ಅದನ್ನ ಗಮನವಿಟ್ಟು ಶ್ರದ್ಧೆಯಿಂದ ಮಾಡಿದರೆ ಆ ಕೆಲಸ ಇನ್ನೂ ಚೆನ್ನಾಗಿ ಆಗುತ್ತದೆ ಎಂಬ ಪಾಠ ನನ್ನದಾಯಿತು.

'ಅಮ್ಮ ನಿನ್ನ ಕಾಲು ಮುರಿದದ್ದು ಒಳ್ಳೆಯದಾಯಿತು. ಏಕೆಂದರೆ ಇಲ್ಲಿಯತನಕ ನಿನ್ನನ್ನು ನೋಡಲು, ಮಾತನಾಡಿಸಲು ಯಾರೂ ಮನೆಗೆ ಬರುತ್ತಿರಲಿಲ್ಲ. ಈಗ ಈ ಕಾಲಿನ ನೆಪದಿಂದ ನಿನ್ನ ಸಹೋದ್ಯೋಗಿಗಳು ಮಾತನಾಡಿಸಲು ಬರುತ್ತಾರಲ್ಲ, ನನಗೆ ಅದೇ ಖುಷಿ. ಜೊತೆಗೆ ಬಂದವರು ರುಚಿರುಚಿಯಾದ ಸಾಂಬಾರು, ಪರೋಟ, ಪಲ್ಯ, ಸಿಹಿ ಎಲ್ಲವನ್ನು ನೀಡುತ್ತಾರಲ್ಲ, ಇಷ್ಟೆಲ್ಲ ರುಚಿಕರವಾದ ಅಡುಗೆಯನ್ನು ಸವಿಯುವ ಸುಖ ನಮ್ಮ ಪಾಲಾಗಿದೆಯಲ್ಲ, ನಿನ್ನ ಕಾಲು ಗತಿಯಿಂದ ನಮ್ಮ ದೆಸೆ ಬದಲಾಗಿದೆ' ಎಂದು ಹೇಳಿ ಅಪ್ಪ ಮಗಳು ಕಾಲು ಮೇಲೆ ಹಾಕಿ ಕುಳಿತ ನನ್ನ ನೋಡಿ ಗೇಲಿ ಮಾಡುತ್ತಿದ್ದರು.

ಕಾಲು ಮುರಿದು ಕೆಲಸ ಮಾಡಲಾಗದೆ ಕುಳಿತ ಅಂದಿನಿಂದ ಒಂದು ದಿನವು ಕಷ್ಟವಾಗದಂತೆ ನನ್ನ ಸಹೋದ್ಯೋಗಿಗಳು, ಆತ್ಮೀಯರು ಪ್ರೀತಿಯಿಂದ ಒಂದಲ್ಲ ಒಂದು ಅಡುಗೆ ಪದಾರ್ಥಗಳನ್ನ ಮಾಡಿ ನೀಡುತ್ತಿದ್ದರು. ಆ ಪ್ರೀತಿ ವರ್ಣಿಸಲಸದಳ.



ಕೊರೊನಾ ಕಾಲದಲ್ಲಿ ತುಸು ಸಮಯ ಮನೆಯಲ್ಲಿಯೇ ಇದ್ದರೂ ಬೇರೆ ಇತರ ಕೆಲಸವೂ ಇರುತ್ತಿತ್ತು. ದಿನಪೂರ್ತಿ ಒಂದಲ್ಲ ಒಂದು ಕೆಲಸದಲ್ಲಿ ಭಾಗಿಯಾಗಿದ್ದ ನನಗೆ ಹೀಗೆ ಕಾಲು ಮೇಲೆ ಇಟ್ಟು ಖಾಲಿ ಕುಳಿತುಕೊಳ್ಳುವುದು ಹೇಗಪ್ಪಾ ಎಂದು ಚಿಂತಿಸುತ್ತಿದ್ದೆ. ಆಗ ಸಿಕ್ಕಿದ ದಾರಿಯೇ ಮಲಯಾಳಂ ಸಿನಿಮಾ ಪ್ರಪಂಚ. ದಿನಕ್ಕೆ ಕನಿಷ್ಠ ಎರಡು ಸಿನಿಮಾಗಳನ್ನು ಬಹಳ ಗಂಭೀರವಾಗಿ ನೋಡಲು ಶುರು ಮಾಡಿದೆ. ಮೊದಲಾದರೆ ನಾನು ಸಿನಿಮಾವನ್ನು ನೋಡಲು ಕುಳಿತಾಗೆಲ್ಲ ಅಡುಗೆ ಕೋಣೆಯ ಕೆಲಸ ಪಾತ್ರೆ ತಿಕ್ಕುವುದು, ಬಟ್ಟೆ ಮಡಚಿಡಬೇಕು ಎಂದೆಲ್ಲಾ ತಲೆ ಬೇರೆ ಬೇರೆ ವಿಚಾರಕ್ಕೆ ಸುಳಿಯುತ್ತಿತ್ತು. ಚಿತ್ರಮಂದಿರಕ್ಕೆ ಹೋದಾಗ ಮಾತ್ರ ಸಿನಿಮಾವನ್ನು ಏಕಾಗ್ರತೆಯಿಂದ ನೋಡುತ್ತಿದ್ದೆ. ಆದರೆ ಬೇರೆ ಯಾವ ಕೆಲಸವನ್ನು ಮಾಡಲಾಗದೆ ಇದ್ದ ಪರಿಸ್ಥಿತಿಯಲ್ಲಿ ಸಿನಿಮಾವನ್ನು ಗಂಭೀರವಾಗಿ ನೋಡಲು ತೊಡಗಿದೆ. ಒಂದು ಸಲ ಮಲಯಾಳಂ ಸಿನಿಮಾ ನೋಡುವ ಆಸಕ್ತಿ ಹುಟ್ಟಿದರೆ ಇತರ ಯಾವ ಭಾಷೆ ಸಿನಿಮಾವು ಕೂಡ ಮೆಚ್ಚದು. ನಮ್ಮ ದಿನನಿತ್ಯದ ಬದುಕಿನಲ್ಲಿ ಘಟಿಸುವ ಸಣ್ಣಪುಟ್ಟ ವಿಷಯವು ಒಂದು ಸಿನಿಮಾವಾಗಿ ಮೂಡುತ್ತದೆ. ಅಲ್ಲಿ ಹೀರೊಯಿಸಂನ ಸಂಗತಿ ಇಲ್ಲ. ಅದ್ಭುತ ನಟನು ಕೂಡ ಸಾಮಾನ್ಯ ಪಾತ್ರಗಳನ್ನು ಮಾಡಬಲ್ಲ, ಸಾಮಾನ್ಯ ವ್ಯಕ್ತಿಯಂತೆ ಕಾಣುವವರೂ ಹೀರೊ ಆಗಿ ಬದಲಾಗಬಹುದು. ಸಿನಿಮಾ ಆಸಕ್ತಿ ಇರುವವರಿಗೆ ಒಂದು ಅದ್ಭುತ ಜಗತ್ತು. ನನ್ನ ಕಾಲು ನೋವಿನ ಮರೆವಿಗೆ ಔಷಧಿಯಾಗಿ ಸಿಕ್ಕಿದ್ದೇ ಈ ಒಟಿಟಿ ವೇದಿಕೆ. ಒಂದಷ್ಟು ಉತ್ತಮ ಚಿತ್ರಗಳನ್ನು ನೋಡಲು ಸಂದರ್ಭ ಕಲ್ಪಿಸಿದ್ದು ಮತ್ತದೇ ನನ್ನ ಸಂಗಾತಿ ಕಾಲಗವಚ.

ಮದುವೆಯಾಗಿ 20 ವರ್ಷವೇ ಆಗುತ್ತಾ ಬಂತು. ಆದರೆ ಗಂಡ, ಮಗಳು, ಮನೆ ಈ ಪ್ರೀತಿಯನ್ನು ಇನ್ನಷ್ಟು ಅರ್ಥೈಸುವ ಅವಕಾಶ ಈಗ ಒದಗಿಬಂತು. ಇನ್ನಾರಿಗೋ ಇಂತಹ ಪರಿಸ್ಥಿತಿ ಬಂದರೆ ನಾನೇನು ಸಹಾಯ ಮಾಡಬಲ್ಲೆ ಎಂಬ ನಿಟ್ಟಿನಲ್ಲಿ ಆಲೋಚಿಸುವಂತಹ ಮನಸ್ಥಿತಿ ಈ ಕಾಲಿನ ಏಟಿನಿಂದ ಅರ್ಥವಾಯಿತು. ಬದುಕಿನ ಓಟದಲ್ಲಿ ನಮ್ಮ ಮುಂದಿನ ಭವಿಷ್ಯಕ್ಕೆ ಆಸರೆಯಾಗಿರಲಿ ಎಂದು ಸಂಪಾದನೆಯ ಹಿಂದೆ ಬಿದ್ದು ನಮ್ಮವರನ್ನೇ ಕಡೆಗಣಿಸುತ್ತೇವೆ. ಬದುಕಿಗೆ ಕೆಲಸ, ಸಂಪಾದನೆ ಎಲ್ಲವೂ ಮುಖ್ಯ. ಆದರೆ ನಮ್ಮವರ ಜೊತೆಗೆ ಕೆಲಸದ ಒತ್ತಡವೆಂದು ಸಿಡುಕಿನಿಂದ ಮಾತನಾಡುತ್ತಾ ಸಮಯ ಕೊಡದೆ ಬದುಕುವುದರಲ್ಲಿ ಅರ್ಥವಿಲ್ಲ. ಇದ್ದಾಗ ಒಬ್ಬರಿಗೊಬ್ಬರು ಆಸರೆಯಾಗಿ, ಪ್ರೀತಿಯಿಂದ ಬದುಕುವುದೇ ಜೀವನ. ಇಂದು ಕಾಲಿನ ಈ ಬ್ಯಾಂಡೇಜ್ ಬಿಡಿಸುವ ದಿನ. ಈ ನನ್ನ ಸಂಗಾತಿ ಕಾಲಗವಚಕ್ಕೆ ವಿದಾಯ ಹೇಳುತ್ತಾ ಮತ್ತೆ ನಾನು ಜಂಜಾಟದ ಬದುಕಿನೊಳಗೆ ಇದ್ದು ನನ್ನವರನ್ನು ಅರಸುವ, ಪ್ರೀತಿಸುವ ಬದುಕು ಸಿಗುವಂತಾಗಲಿ.

**ಪ್ರತಿಕ್ರಿಯಿಸಿ: feedback@sudha.co.in**